**<u>ದಿನಾಂಕಃ 04–10–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಫ್.ಎಂ.ಎಂ. ವಕೀಲರಿಂದಃ</u>**

1 ನೇ ವಾದಿ ಅಪಘಾತದಿಂದ ಕಾಲಿನ ಮೂಳೆ ಮುರಿದು ಓಡಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ವಾದಿ ಕಳೆದ 2 ವರ್ಷದಿಂದ ಮೈಯಲ್ಲಿ ಹುಷಾರಿಲ್ಲದೇ ಹಾಸಿಗೆ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯರು ಮತ್ತು ಬಸಪ್ಪ ನಮ್ಮ ಕುಟುಂಬದ ಯಾವುದೇ ಕಾರ್ಯಕ್ರಮಕ್ಕೆ ದಾವಣಗೆರೆಯಿಂದ ಬಂದುಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣನ ಹೆಂಡತಿ ಬಸಮ್ಮ ಎಂದರೆ ಸರಿಯಲ್ಲ. ಅವರ ದಾಂಪತ್ಯದಿಂದ 1 ನೇ ವಾದಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಬಸಪ್ಪಗೆ ವಾದಿಯರು ಹೆಂಡತಿ-ಮಗ ಎಂದರೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2017 ರಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸಿದ ನಂತರ ವಾದಿಯರು ಯಾರು ಎಂದು ನಾನು ಪ್ರಯತ್ನ ಮಾಡಿಕೊಂಡಿರುವುದಿಲ್ಲ. ಏಕೆಂದರೆ ಅವರು ನನಗೆ ಸಂಬಂಧ ಇರುವುದಿಲ್ಲ. ನಾನು ಅವರ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಏಕೆಂದರೆ ಅವರು ನನಗೆ ಸಂಬಂಧ ಇರುವುದಿಲ್ಲ. ಅವರು ಬಸಪ್ಪನ ಹೆಂಡತಿ ಮತ್ತು ಮಗ ಆಗಿದ್ದರಿಂದ ನಾನು ವಿಚಾರಣೆ ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮೊಟೇಬೆನ್ನೂರು ಗ್ರಾಮದಲ್ಲಿ ನಮ್ಮ ಮನೆತನದ ಹಾಗೂ ಜನಾಂಗದ ಜನರು ಬಹಳ ಇದ್ದಾರೆ ಎಂದರೆ ಇರಬಹುದು. ಅವರಿಗೆಲ್ಲ ವಾದಿಯರು ಬಸಪ್ಪನ ಹೆಂಡತಿ ಮತ್ತು ಮಗ ಎಂದು ಗೊತ್ತಿರುತ್ತದೆ ಎಂದರೆ ಸರಿಯಲ್ಲ. ವಾದಿಯರನ್ನು ಜನರು ಬಸಪ್ಪನ ಹೆಂಡತಿ ಮಗ ಎಂದು ಗುರುತಿಸುತ್ತಾರೆ ಎಂದರೆ ಸರಿಯಲ್ಲ. ವಾದಿ ಯಾರು ಎಂದು ದಾಖಲೆಯನ್ನು ತೆಗೆಸಲು ಪ್ರಯತ್ನ ಮಾಡಿರುವುದಿಲ್ಲ. ಏಕೆಂದರೆ ಅವರು ನನಗೆ ಸಂಬಂಧ ಇರುವುದಿಲ್ಲ. ಚಿಕ್ಕಪ್ಪನ ಅಕ್ಕ ಪಾರ್ವತೆವ್ವ ಎಂಬುವವರು ಇದ್ದರು ಎಂದರೆ ಸರಿಯಲ್ಲ. ಪಾರ್ವತೆವ್ವರವರನ್ನು ಚಿಕ್ಕಲಿಂಗದಳ್ಳಿ ಗ್ರಾಮದ ಪಕ್ಕಿರಪ್ಪ ಕಳಗೊಂಡರವರಿಗೆ ಕೊಟ್ಟು

ಮದುವೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಅವರ ನಾಲ್ಕು ಜನ ಮಕ್ಕಳಲ್ಲಿ ನಿಂಗಪ್ಪ ಜೀವಂತವಾಗಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆತನದ ಹೆಳವ ಮಾರುತಿ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ನಮ್ಮ ಮನೆತನದ ಸದಸ್ಯರ ಹೆಸರು ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರ ಪುಸ್ತಕದಲ್ಲಿ ವಾದಿಯರು ಬಸಪ್ಪನ ಹೆಂಡತಿ ಮತ್ತು ಮಗ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಮಾರುತಿರವರು ಬಟ್ಟಲಕಟ್ಟಿ ವಂಶದ ಎಲ್ಲ ಘರಾಣೆದ ಜನರ ಬಗ್ಗೆ ದಾಖಲೆ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ವಿಚಾರಣೆ ಆದನಂತರ ನಮ್ಮ ವಕೀಲರು ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ದಾಖಲೆಗಳನ್ನು ತೆಗೆಸಿ ಹಾಜರು ಪಡಿಸಿರುತ್ತಾರೆ ಎಂದರೆ ನಮಗೆ ಸಂಬಂದಿಸಿರುವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ. ನಿಪಿ-20 ಮತ್ತು 21 ರಲ್ಲಿ ಇರುವ ವ್ಯಕ್ತಿ ನಟರಾಜ್ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-20 ರಲ್ಲಿರುವ ಮಹಿಳೆ ಮಂಗಳಮ್ಮ ಎಂದರೆ ಸರಿಯಲ್ಲ. ನಿಪಿ-20, 21 ರಲ್ಲಿ ವಾದಿಯರು ಬಸಪ್ಪನ ಹೆಂಡತಿ ಮಕ್ಕಳಾಗಿದ್ದರಿಂದ ತೆಗೆಸಲಾಗಿದೆ ಎಂದರೆ ಸರಿಯಲ್ಲ. ನಾನು ಇವುಗಳನ್ನು ಒಪ್ಪಿಕೊಂಡರೆ ವಾದಿಯರಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಆಧಾರ್ ಕಾರ್ಡ್‌ನಲ್ಲಿ ತಂದೆ ಹೆಸರು ಬಸಪ್ಪ ಬಟ್ಟಲಕಟ್ಟಿ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ಹುಟ್ಟಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಅದೇರೀತಿ 2 ನೇ ವಾದಿಯ ಆಧಾರ್ ಕಾರ್ಡ್‌ನಲ್ಲಿ ಗಂಡನ ಹೆಸರು ಬಸಪ್ಪ ಬಟ್ಟಲಕಟ್ಟಿ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ಇತ್ತಿಚೆಗೆ ಹುಟ್ಟಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಆಧಾರ್ ಕಾರ್ಡ್‌ಗಳಲ್ಲಿ ಅವರು ಎಲ್ಲಿ ವಾಸವಾಗಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಇದೆ ಎಂದು ಹೇಳುತ್ತಾರೆ. ದಾಖಲೆಗಳನ್ನು ಹಾಜರು ಮಾಡಿ 6-7 ವರ್ಷ ಆಗಿರಬಹುದು. ನಾನು ಸದರಿ ದಾಖಲೆಗಳನ್ನು ಹುಟ್ಟಿಸಿಕೊಂಡಿರುತ್ತಾರೆ ಎಂದು ಪ್ರಶ್ನೇ ಮಾಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿಯೂ ಅವರು ಸಂಬಂಧ ಪಡದೆ ಇದ್ದರಿಂದ ಪ್ರಶ್ನಿಸಿರುವುದಿಲ್ಲ. ನನಗೆ ಈ ರೀತಿ ಪ್ರಶ್ನೇ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಅವರು ನಮ್ಮ ಘರಾಣೆಕ್ಕೆ ಸಂಬಂದ ಪಡದೇ ಇದ್ದರಿಂದ ಪ್ರಶ್ನೇ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಯ ನನ್ನ ಅಣ್ಣನ

ಹೆಂಡತಿ ಮತ್ತು ಮಗ ಆಗಿದ್ದರಿಂದ ನಾನು ದಾಖಲೆಗಳನ್ನು ಪ್ರಶ್ನೇ ಮಾಡಿದರೆ ಊರ್ಜಿತವಾಗುವುದಿಲ್ಲ ಎಂದು ಪ್ರಶ್ನೇ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪ ತೀರಿಕೊಂಡ ನಂತರ ವಾದಿಯರಿಗೆ ನೋಟಿಸ್ಸು ಕೋಡದೇ ಕಾನೂನುಬಾಹಿರವಾಗಿ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬಸಪ್ಪ ಸಾಯುವ ಪೂರ್ವದಲ್ಲಿ ಮೋಟೆಬೆನ್ನೂರ ಗ್ರಾಮದಲ್ಲಿ ವಾಸವಾಗಿದ್ದ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹಾಜರು ಮಾಡಿರುವ ದಾಖಲೆ ವಾದಿಯರ ಪ್ರಕರಣಕ್ಕೆ ಸಂಬಂಧ ಪಡದ ದಾಖಲೆಗಳು ಎಂದರೆ ಸರಿಯಲ್ಲ. ನಮಗೆ ಸಂಬಂಧ ಪಟ್ಟ ದಾಖಲೆಗಳು ಇರುತ್ತದೆ. ನಿಂಗಪ್ಪ ಬಟ್ಟಲಕಟ್ಟಿರವರ ವಾರಸುದಾರರು ಜೀವಂತ ಇದ್ದಾರೆ ಎಂದರೆ ಸರಿಯಲ್ಲ. ನಿಂಗಪ್ಪರವರ ಮಗ ಭೀಮಪ್ಪ ಜೀವಂತ ಆಗಿದ್ದಾರೆ. ಅವರ ಹೆಂಡತಿ ಯಲ್ಲವ್ವ ಮೃತಪಟ್ಟಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಅವರ ಬಗ್ಗೆ ಬರೆಸಿರುತ್ತೇನೆ. ಅವರು ನಮಗೆ ಸಂಬಂಧಪಟ್ಟವರು ಎಂದು ಬರೆಸಿರುತ್ತೇನೆ. ನನ್ನ ಅಣ್ಣ ಬಸಪ್ಪ 2002 ರಲ್ಲಿ ಮೃತಪಟ್ಟಿರುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಯರಿಗೆ ¼ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಅವರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಬಸಪ್ಪ ಮದುವೆಯಾಗದೇ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರತಿವಾದಿ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲ ಅಂಶಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ವಾದಿಯರ ¼ ಹಿಸ್ಸೆ ಎತ್ತಿಹಾಕಬೇಕು ಅಂತಾ ಹೇಳಿ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.